ಶ್ರೀ ವಾಟಾಳ್ ನಾಗರಾಜ್:- ನಿನ್ನೆ ವಿರೋಧ ಪಕ್ಷದ ಮುಖಂಡರುಗಳ ಸಭೆಯನ್ನು ಏಕೆ ಕರೆಯಬೇಕಾಗಿತ್ತು, ಯಾವ ಉದ್ದೇಶಕ್ಕೆ ಕರೆಯಬೇಕಾಗಿತ್ತು. ಈ ಸರ್ಕಾರ ಇಷ್ಟೊಂದು ಬೇಜವಾಬ್ದಾರಿತನದಿಂದ ಇರಲು ಕಾರಣವೇನು? ನಾವು ಅಲ್ಲಿ ಮಾತನಾಡಬಹುದಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನು ಸರ್ಕಾರದ ನೀತಿಯನ್ನು ಕಠೋರವಾಗಿ ವಿರೋಧಿಸುತ್ತೇನೆ. ಈ ಸರ್ಕಾರ ರಾಜೀನಾಮೆ ಕೊಡಬೇಕು, ಸರ್ಕಾರ ಒಂದು ನಿಮಿಷವೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದು ಸ್ಪಷ್ಟ. ಇದು ನಮ್ಮ ನಿಲುವು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದು ಅಕ್ಷಮ್ಯ ಅಪರಾಧ. ಪ್ರಧಾನಿಯವರ ಕೈಗೊಂಬೆಯಾಗಿ ಇವತ್ತು ಈ ರಾಜ್ಯದ ಮುಖ್ಯ ಮಂತ್ರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇತಿಮಿತಿ ಇದೆ. ನಿನ್ನೆಯ ವಿರೋಧ ಪಕ್ಷಗಳ ನಾಯಕರ ಸಭೆಯಲ್ಲಿ ಜಲಾಶಯದಲ್ಲಿ ನೀರಿಲ್ಲ ಎಂದು ಹೇಳಿದರು.

(ಗೊಂದಲ)

ಅಧ್ಯಕ್ಷರು:- ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ನಿನ್ನೆ ಅನೇಕ ಕಾರ್ಯಕ್ರಮಗಳು ನಮ್ಮ ಮುಂದೆ ಇದ್ದರೂ ಕೂಡ ತಮ್ಮ ಮಾತು ಕೇಳಿ ನಾವು ಕೆ.ಇ.ಬಿ. ವಿಷಯವನ್ನು ಸೌಹಾರ್ದತೆಯಿಂದ (ಅಮಿಕಬಲಿ) ಸೆಟಲ್ ಮಾಡಿದೆವು. ಆದರಲ್ಲಿ ಅವರೂ ಪ್ರತಿಷ್ಠೆ ಮಾಡಲಿಲ್ಲ, ನಾವೂ ಪ್ರತಿಷ್ಠೆ ಮಾಡಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಪ್ರಶ್ನೋತ್ತರವನ್ನು ಬದಿಗೊತ್ತಿ ಇದರ ಮೇಲೆ ಚರ್ಚೆಗೆ ಅವಕಾಶ ಕೊಡಿ. ಇದು ಮಹತ್ತರವಾದಂಥಾದ್ದು. ನೀವು ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದರ ಬಗ್ಗೆ ದೀರ್ಘವಾದಂಥ ಚರ್ಚೆಯಾಗಬೇಕು. ಇಲ್ಲದಿದ್ದರೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ಒಂದೇ ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ, ದಯಮಾಡಿ ನಾನು ಹೇಳುವುದನ್ನು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ.

ಅಧ್ಯಕ್ಷರು:- ಪುಟ್ಟಣ್ಣಯ್ಯನವರೇ ತಾವು ಕುಳಿತುಕೊಳ್ಳಿ, ವಾಟಾಳ್‌ರವರೇ ಕುಳಿತುಕೊಳ್ಳಿ, ನಾನು ಏನು ಹೇಳುತ್ತೇನೆಂದರೆ, ತಾವೆಲ್ಲರೂ ಕೂಡ ಹಿರಿಯ ನಾಯಕರುಗಳಾಗಿದ್ದೀರಿ. ತಾವು ಏನೇನು ಹೇಳಬೇಕಾಗಿದೆಯೋ ಅದನ್ನು ಒಬ್ಬೊಬ್ಬರಾಗಿ ಎದ್ದು ಹೇಳಿ, ಕೇಳುವುದಕ್ಕೆ ನಾನು ತಯಾರಾಗಿದ್ದೇನೆ. ದಯಮಾಡಿ ಒಂದು ನಿಮಿಷ ಶಾಂತಿ. ನೀವೆಲ್ಲರೂ ಒಟ್ಟಿಗೆ ಎದ್ದು ಕೇಳಿದರೆ ನೀವು ಹೇಳುವುದು ನನಗೂ ಅರ್ಥವಾಗುತ್ತಿಲ್ಲ, ಅವರಿಗೂ ಬರೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ, ಇವರಿಗೂ ಬರೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ತಾವು ಬಂದಿರಿ, ಬಂದ ತಕ್ಷಣ ಖರ್ಗೆಯವರೂ ಎದ್ದು ನಿಂತುಕೊಂಡರು, ವಾಟಾಳರೂ